LEGISLATIVE ASSEMBLY.

FIFTEENTH DAY.

Saturday, 31st March 1951.

The Assembly met in the Assembly Hall, Old Public Offices, Bangalore, at Six Minutes past Eight of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS.

(to which oral answers were given).

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಮಾನ್ಯ ಹಣಕಾಸಿನ ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಅದರಂತೆ ಈಗ Vನೇ ಭಾಗದಲ್ಲಿ 224ನೆಯ ಪ್ರಶ್ನೆಯನ್ನು ತೆಗೆದುಕೊಳ್ಳಬಹುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಸಚಿವರು).—ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಮಾನ್ಯ ಶ್ರೀ ಚೆನ್ನಿಗರಾಮಯ್ಯನವರೂ, ವೈದ್ಯ ಭಾಗಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಮಾನ್ಯ ಶ್ರೀ ಭಾಷ್ಯಂರವರೂ ಉತ್ತರ ಕೊಡುತ್ತಾರೆ. ಮಿಕ್ಕವುಗಳಿಗೆ ನಾನು ಉತ್ತರ ಕೊಡುತ್ತೇನೆ.

Appointing Revenue Probationers from Boi Community.

*ಪ್ರಶ್ನೆ 224.—ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಡಿಸ್ಟ್ರಿಕ್ಟ್—ನಿಮ್ನ ಪಂಗಡ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

ಕಳೆದ ಹತ್ತು ವರ್ಷಗಳಿಂದಲೂ ಬೋಯಿಕೋಮಿನವರ ಪೈಕಿ ರೆವಿನ್ಯೂ ಪ್ರೊಬೇಷನರುಗಳಾಗಿ ತೆಗೆದುಕೊಳ್ಳಲಾಗಿರುವವರ ಸಂಖ್ಯೆ ಎಷ್ಟು ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಸಚಿವರು).—ಯಾರೂ ಇಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಬೋಯಿ ಜನಾಂಗದವರಲ್ಲ ರೆವಿನ್ಯೂ ಪ್ರೊಬೇಷನರಾಗಿ ತೆಗೆದುಕೊಳ್ಳುವ ಅರ್ಹತೆ ಪಡೆದಿರುವವರು ಯಾರೂ ಇರಲಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಸಚಿವರು).—ಅರ್ಹತೆಯಿರುವವರು ಇರಬಹುದು. ಖಚಿತವಾಗಿ ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅವರಲ್ಲಿ ಪದವೀಧರರು ಯಾರೂ ಇರಲಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಗೊತ್ತಿಲ್ಲ ; ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅವರಲ್ಲಿ ಪದವೀಧರರಿದ್ದಮೇಲೆ ಅವರಿಗೂ ಈ ಹುದ್ದೆಗಳನ್ನು ಕೊಡಬೇಕಾದ್ದು ಧರ್ಮವಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮುಂದೆ ರೆವಿನ್ಯೂ ಪ್ರೊಬೇಷನರುಗಳನ್ನು ತೆಗೆದುಕೊಳ್ಳುವಾಗ ಯೋಚನೆ ಮಾಡೋಣ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತಾವು ರೆವಿನ್ಯೂ ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕಾದರೆ ಜಾತಿವಾರಾಗಿ ತೆಗೆದುಕೊಳ್ಳುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಊಹೆಯ ಪ್ರಶ್ನೆ. ಈಚೆಗೆ ಮೂರು ವರ್ಷದಿಂದ ರೆವಿನ್ಯೂ ಪ್ರೊಬೇಷನರನ್ನು ಯಾರನ್ನೂ ತೆಗೆದುಕೊಂಡಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಿಂದಿನ 10 ವರ್ಷದಿಂದ ಯಾರನ್ನೂ ತೆಗೆದುಕೊಂಡಿಲ್ಲವೇ ಎಂದು ಕೇಳಿದ್ದೇನೆ. ಹತ್ತು ವರ್ಷದಿಂದ ಅವರಲ್ಲ ಅರ್ಹತೆ ಪಡೆದಿರುವವರು ಯಾರೂ ಇರಲಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇನ್ನು ಮೇಲಾದರೂ ತೆಗೆದುಕೊಳ್ಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಗಲೇ ಹೇಳಿದಂತೆ, ಇನ್ನೊಂದು ಬಾರಿ ತೆಗೆದುಕೊಳ್ಳುವ ನಂದರ್ಭದಲ್ಲಿ ಈ ವಿಚಾರ ಯೋಚನೆ ಮಾಡುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ನಮ್ಮ ಬೋಯಿ ಜನಾಂಗದವರ ಜನಸಂಖ್ಯೆ ಎರಡು ಲಕ್ಷದಷ್ಟಿದೆಯೆಂಬುದು ಗೊತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸೆನ್ಸಸ್ ಅಂಕಿಗಳೇ ತೋರಿಸುತ್ತೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಆದ್ದರಿಂದ ಪ್ರಮಾಣದ (ratio) ಪ್ರಕಾರ ನಮ್ಮ ಪಂಗಡದವರಿಗೆ ಪ್ರಾತಿನಿಧ್ಯ ಕೊಡಬೇಕಾದ್ದು ನ್ಯಾಯವಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪ್ರಮಾಣದ (ratio) ಪ್ರಕಾರ ಕೊಡಬೇಕೆಂದು ಇದುವರೆಗೂ ಖಡಾಖಂಡಿತವಾಗಿ ಏನೂ ಇಲ್ಲ. ಪ್ರತಿಯೊಬ್ಬರಿಗೂ ಆದಷ್ಟುಮಟ್ಟಿಗೆ ಪ್ರಾತಿನಿಧ್ಯವಿರಬೇಕೆಂಬುದೇ ನಮ್ಮ ಉದ್ದೇಶ

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇನ್ನು ಮುಂದೆ ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕಾದರೆ ನಮ್ಮ ಬೋಯಿ ಜನಾಂಗದವರನ್ನೂ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಯೋಚನೆ ಮಾಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ರೆವಿನ್ಯೂ ಪ್ರೊಬೇಷನರುಗಳನ್ನು ಸದ್ಯದಲ್ಲೇ ನಾದರೂ ತೆಗೆದುಕೊಳ್ಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ತೆಗೆದು ಕೊಳ್ಳಬೇಕಾಗಿ ಬರಬಹುದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಈಗಾಗಲೇ ತೆಗೆದುಕೊಂಡು ಎಷ್ಟು ವರ್ಷ ಆಯಿತು ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಮೂರು ವರ್ಷದ ಮೇಲಾಯಿತು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಬೋಯಿ ಜನಾಂಗದವರನ್ನು ತೆಗೆದುಕೊಳ್ಳಬೇಕಾದರೆ ಅವರೂ ನಿಮ್ಮ ತರಗತಿಯವರಲ್ಲೊಬ್ಬರೆಂದು ತಾನೇ ತೆಗೆದು ಕೊಳ್ಳುತ್ತೀರಿ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಹಾಗೂ ಮಾಡಬಹುದು ; ಇಲ್ಲದಿದ್ದರೆ ಬೇರೆ ಜನಾಂಗವೆಂದು ಭಾವಿಸಿಯೂ ತೆಗೆದುಕೊಳ್ಳಬಹುದು.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಸರ್ವಿಸ್ಸಿನಲ್ಲಿ ಸಾಕಾದಷ್ಟು ಪ್ರಾತಿನಿಧ್ಯವಿಲ್ಲದ ಜನಾಂಗದವರಿಗೆ ಪ್ರಾಧಾನ್ಯ ಕೊಡಬೇಕೆಂಬುದಲ್ಲವೇ ನಿಮ್ಮ ಸಾಮಾನ್ಯ ನೀತಿ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅದು ತೀರಾ ಜನರಲ್ ಆದ ಪ್ರಶ್ನೆಯಾಯಿತು. ಇದು ಬೋಯಿ ಜನಾಂಗಕ್ಕೆ ಮಾತ್ರ ಸಂಬಂಧಪಟ್ಟ ಪ್ರಶ್ನೆ. ಇತರೇ ಜನಾಂಗದವರ ವಿಚಾರ ಕೇಳಿದರೆ ಪ್ರಶ್ನೆಯ ವ್ಯಾಪ್ತಿ ಹಾಸ್ಯಾಯಾಗುತ್ತದೆ.

ಅಧ್ಯಕ್ಷರು.—ಬೋಯಿ ಜನಾಂಗದವರನ್ನು ತೆಗೆದು ಕೊಂಡಿದ್ದಾರೆಯೇ ಎಂದು ಇಲ್ಲಿರುವ ಪ್ರಶ್ನೆ. ಬಾಕಿ ಜನಾಂಗದವರ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಮಾದಯ್ಯನವರು.—ಈಗ ಸರ್ವಿಸ್ಸಿನಲ್ಲಿ ಬೋಯಿ ಜನಾಂಗದವರಿಗೆ ಸಾಕಾದಷ್ಟು ಪ್ರಾತಿನಿಧ್ಯ ವಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ನೋಟೀಸ್ ಬೇಕು.

Mr. SPEAKER.—Next Question 61 Sri G. Narayana Gowda. The Hon'ble Member is not present, The question will be treated as unstarred. Next question No. 72.

Appointment of Special Magistrates.

*ಪ್ರಶ್ನೆ 72.—ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಡಿಸ್ಟ್ರಿಕ್ಟ್—ನಿಮ್ನ ಪಂಗಡ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) 1947ನೆಯ ಇಸವಿ ನವೆಂಬರ್ ತಿಂಗಳಿನಿಂದೀಚೆಗೆ ಏರ್ಪಡಿಸಲ್ಪಟ್ಟ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟುಗಳ ಒಟ್ಟು ಸಂಖ್ಯೆ ಎಷ್ಟು ;

(b) ಆ ಸಂಬಂಧದಲ್ಲಿ ಎಷ್ಟು ಮಂದಿ ಅನರರಿ ಮ್ಯಾಜಿಸ್ಟ್ರೇಟರುಗಳನ್ನು ನೇಮಕಮಾಡಲಾಯಿತು ? (ಅವರ ಹೆಸರುಗಳನ್ನು ಕೋಮುವಾರಾಗಿ ತಿಳಿಸ ಬೇಕೆಂದು ಪ್ರಾರ್ಥನೆ.)

ಉತ್ತರ.— ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು (ಹಣಕಾಸಿನ ನಚಿವರು).—

(a) 1947ನೆಯ ಇಸವಿ ನವೆಂಬರ್ ತಿಂಗಳಿನಿಂದೀಚೆಗೆ ಹೊಸದಾಗಿ ಯಾವ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟನ್ನೂ ಏರ್ಪಡಿಸಿಲ್ಲ;

(b) ಸಂಸ್ಥಾನದಲ್ಲಿ ಹಾಲಿ ಇರತಕ್ಕ ಬೆಂಚ್ ಕೋರ್ಟುಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳ ಹೆಸರು ಗಳನ್ನು ತೋರಿಸುವ ತಖ್ತೆಯನ್ನು ಪರಿಶಿಷ್ಟದಲ್ಲಿ ಕೊಡ ಲಾಗಿದೆ. (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ).

ಹಾಸನ ಡಿಸ್ಟ್ರಿಕ್ಟಿನ, ಬೆಂಚ್ ಕೋರ್ಟುಗಳಿಗೆ ನೇಮಕಮಾಡಲ್ಪಟ್ಟಿರತಕ್ಕ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳಿಗೆ ಸಂಬಂಧಪಟ್ಟ ವಿವರಗಳು.

I. ಹಾಸನದ ಬೆಂಚ್ ಕೋರ್ಟ್

(a) ಜೈನರು

ಶ್ರೀ ಎಚ್. ಡಿ ಬ್ರಹ್ಮದೇವಯ್ಯನವರು
,, ಎಚ್. ಎಸ್. ಧರಣಪ್ಪನವರು
,, ಎಚ್. ಡಿ ಪದ್ಮರಾಜಯ್ಯನವರು
,, ಎಚ್. ಎ. ಪಾಯಣ್ಣನವರು
,, ಎಚ್. ಪಿ. ಅಂತರಾಜಯ್ಯನವರು
,, ಎಸ್. ಪಿ. ಭುಜಬಲಯ್ಯನವರು

(b) ಒಕ್ಕಲಿಗರು

ಶ್ರೀ ಎಚ್. ವಿ. ತಿಮ್ಮಪ್ಪನವರು
,, ಎಚ್. ಎಸ್. ರಾಮಯ್ಯನವರು
,, ಎಚ್. ಎಸ್. ಸಣ್ಣಪ್ಪನವರು
,, ಎಚ್. ಸಂಜೀವಯ್ಯನವರು
,, ಎಚ್. ವಿ. ಲಕ್ಷ್ಮಯ್ಯನವರು
,, ಜೆ. ವಿ. ಹೊನ್ನಯ್ಯನವರು

(c) ಲಿಂಗಾಯಿತರು

ಶ್ರೀ ಎಚ್. ಬಿ. ಸಿದ್ದಪ್ಪನವರು

(d) ಮುಸಲ್ಮಾನರು

ಜನಾಬ್ ಅಬ್ದುಲ್‌ರಹೀಂ ಸಾಹೇಬ್‌ರವರು
,, ಎಚ್. ಎಂ. ಖಾದರ್ ಹುಸ್ಸೇನ್‌ರವರು

(e) ವೈಶ್ಯರು

ಶ್ರೀ ಎಚ್. ಎಸ್. ವೆಂಕಟಾಚಲಸೆಟ್ಟಿಯವರು
,, ಡಿ. ಆರ್. ಶ್ರೀನಿವಾಸಶೆಟ್ಟಿಯವರು

(f) ಬ್ರಾಹ್ಮಣರು

ಶ್ರೀ ಬಿ. ಎ. ಶ್ರೀನಿವಾಸಯ್ಯಂಗಾರ್ ಅವರು
,, ಎಂ. ಶ್ರೀನಿವಾಸರಾಯರು
,, ಎಂ. ಎಲ್. ನರಸಿಂಹ ಅಯ್ಯಂಗಾರ್ ಅವರು